# ಸರ್ವವ್ಯಾಪಿಯಾದ ಸ್ವಸ್ತಿಕ ಲಾಂಛನ

ಭರತಖಂಡದಲ್ಲೆ ಉದ್ಭವಿಸಿ ಸುಮಾರು ಹತ್ತು ಸಾವಿರ ವರ್ಷದಿಂದ ಪ್ರಪಂಚದ ಎಲ್ಲ ಪ್ರಾಚೀನ ಸಂಸ್ಕೃತಿಗಳನ್ನು ಪ್ರವೇಶಿಸಿ ಈಗಲೂ ಸ್ಫೂರ್ತಿಯನ್ನು ಕೊಡುತ್ತಿರುವ ಸ್ವಸ್ತಿಕ ಚಿಹ್ನೆ ಅದೇ ಹೆಸರಿನಿಂದಲೆ ವಿವಿಧ ಭಾಷೆಗಳಲ್ಲು ಪ್ರಸಿದ್ಧವಾಗಿದೆ.

'ಸು' ಚೆನ್ನಾಗಿ 'ಅಸಿ' ಇದೆ 'ಸ್ವಸ್ತಿ' +ಕ ಹೊಂದಿರುವದು ಸ್ವಸ್ತಿಕ.

ಟಿಬೆಟ್ಟಿನ ಏಕಾಕರ ಚಿಹ್ನೆಯಾದ "ಯುಂಗ್–ಡ್ರುಂಗ್" ಬಾನ್ ಮತದ ಸಂಕೇತವಾಯಿತು. ಗುಪ್ತ ಬ್ರಾಹ್ಮೀ ಅಕ್ಷರಗಳಾದ "ಸು" ಮತ್ತು "ತಿ" ಸೇರಿಸಿದರೆ ಸ್ವಸ್ತಿಕ ಚಿಹ್ನೆಯಾಗುತ್ತದೆ. ಲಡಾಖಿನಲ್ಲಿ ಪ್ರವಾಸ ಮಾಡಿದ ಫ್ರಾಂಕೆ ಈ ಚಿಹ್ನೆ ಸೂರ್ಯನನ್ನು, ನಾಲ್ಕು ದಿಕ್ಕುಗಳನ್ನು, ಗ್ರಹಗತಿಯನ್ನು ಸೂಚಿಸುವದೆಂದು ಭಾವಿಸಿದನು (ಇಂಡಿಯನ್ ಆಂಟಿಕ್ವರಿ, ಸಂಪುಟ ೩೦, ಪುಟ ೧೩೨). ಶುಭ ಎಂಬರ್ಥವೇ ಎಲ್ಲಾ ಕಡೆಯಲ್ಲೂ ಪ್ರಚಾರವಾಗಿದೆ. ಹಿಟ್ಲರ್ ಚುನಾಯಿಸಿದ ಸ್ವಸ್ತಿಕ ಚಿಹ್ನೆ ಎಡಗಡೆಗೆ ತಿರುಗಿಕೊಂಡಿದ್ದು ಅಶುಭ ಚಿಹ್ನೆಯಾಗಿತ್ತು. ಸೂರ್ಯಗತಿಯನ್ನನುಸರಿಸಿ ಪ್ರದಕ್ಷಿಣಾಕಾರವಾಗಿರುವ ಚಿಹ್ನೆ ಶುಭಕರವೆಂದು ಯೂಂಗ್ ಮುಂತಾದ ಮನೋವಿಜ್ಞಾನಿಗಳ ಅಭಿಪ್ರಾಯ. ಇದಕ್ಕೆ ಪ್ರತಿಯಾಗಿ ಎಡಮುರಿ ಸ್ವಸ್ತಿಕವನ್ನು ನಾಜಿಗಳ ಚಿಹ್ನೆಯೆಂದಂಗೀಕರಿಸಿ ಹಿಟ್ಲರನು ಭಯಂಕರವಾದ ಅಜ್ಞಾತಾಂಶಗಳನ್ನು ಹೊರಕೆಡಹಿ ಪ್ರಪಂಚನಾಶವನ್ನೇ ಮಾಡುವ ಪ್ರಯತ್ನ ಮಾಡಿದನು.

## ಅಗ್ನಿಮಂಥನ ಚಿಹ್ನೆ

ಬೂರೊ, ಟೈಲರ್, ವಾಲ್ಡೋಸ್ ಮುಂತಾದವರು ಸ್ವಸ್ತಿಕ ಚಿಹ್ನೆಯು ಅರಣಿ ಮಂಥನದಿಂದ ಬಂದಿತೆಂದು ಊಹಿಸಿದರು.

ಶಿವಲಿಂಗಪಾಣಿಪಟಗಳು ಅಶ್ಲೀಲ ಚಿಹ್ನೆಗಳಲ್ಲವೆಂದು, ವೈದಿಕ ಅಗ್ನಿಮಂಥನ ಸೂಚಿಸುವುವೆಂದು "ಭಾರತೀಯ ಸಂಸ್ಕೃತಿ"ಯಲ್ಲಿ ಸೂಚಿಸಿದೆ. ಬಹುಶಃ ಶಿಲಾಯುಗದಲ್ಲಿ ಆದಿಮಾನವನು ಎರಡು ಒಣಗಿದ ಕಡ್ಡಿಗಳನ್ನು ಉಜ್ಜಿ ಅಗ್ನಿ ಉತ್ಪಾದನೆ ಮಾಡಿದ ಪ್ರತೀಕಗಳೇ ಶಿವಲಿಂಗ ಮತ್ತು ಸ್ವಸ್ತಿಕ ಚಿಹ್ನೆ, ಗ್ರೀಕರ "ಪ್ರೊಮೀಥಿಯಸ್" ಅಗ್ನಿಯನ್ನು

ತಂದನಂತೆ. ಅವನೇ "ಪ್ರಮಂಥ". ಅಗ್ನಿಯನ್ನು ಉತ್ಪಾದಿಸಿ ಹತೋಟಿಯಲ್ಲಿಟ್ಟುಕೊಂಡು ಮಾನವನು ಪಶುಗಳಿಂದ ಬೇರೆಯಾಗಿ ಸಂಸ್ಕೃತಿಯನ್ನಾರಂಭಿಸಿದನು. ನಮ್ಮ ದೇಶದಲ್ಲಿ ಹರಪ್ಪ ಸಂಸ್ಕೃತಿಯಲ್ಲಿಯೇ ಶಿವಲಿಂಗಗಳು, ಸ್ವಸ್ತಿಕ ಚಿಹ್ನೆಗಳೂ ಸಿಕ್ಕಿವೆ. ಅಗ್ನಿಯು ಸು+ಅಸ್ತಿ ಒಳ್ಳೆಯದು ಹೇಗೆ ಎಂಬ ಸಂಶಯ ಬರಬಹುದು. ಅಗ್ನಿಯೇ ರುದ್ರ. ಶಿವನು ಕ್ರೂರಾಕಾರವಾಗಿ ನಾಶಮಾಡುವ ಅಗ್ನಿ ರುದ್ರನು, ಸೌಮ್ಯಾಕಾರವಾಗಿ ಸಹಾಯ ಮಾಡುವವನು ಶಿವನು. ಆದುದರಿಂದ ಅಗ್ನಿಮಂಥನ ಚಿಹ್ನೆಯಾದ ಸ್ವಸ್ತಿಕ ಶುಭಕರ.

## ಶಿಲುಬೆಯ ಚಿಹ್ನೆ

ಬೀಲ್, ಸ್ಯೂಯಲ್, ಮರೆ, ಆಂಸ್ಲೆ ಮುಂತಾದವರು ಸ್ವಸ್ತಿಕ್ ಚಿಹ್ನೆ ಎಡದಿಂದ ಬಲಕ್ಕೆ ಪ್ರದಕ್ಷಿಣಾಕಾರವಾಗಿ ಹೋಗುವ ಸೂರ್ಯನ ಗತಿಯಿಂದ ಹುಟ್ಟಿತೆಂದು ಊಹಿಸಿರುವರು. ಸೂರ್ಯೋದಯದಲ್ಲಿ ಒಬ್ಬನು ಪೂರ್ವಾಭಿಮುಖವಾಗಿ ಸೂರ್ಯನ ಗಮನವನ್ನು ದಕ್ಷಿಣಕ್ಕೂ ಪಶ್ಚಿಮಕ್ಕೂ ಬಲಗೈಯಿಂದ ಸೂಚಿಸಿದರೆ ಒಂದು ವೃತ್ತವೇರ್ಪಡುವುದು. ಅದರ ಕೇಂದ್ರ ಭೂಮಿ, ಆದುದರಿಂದಲೇ ಪ್ರದಕ್ಷಿಣೆ ಮಾರ್ಗ ಶುಭವೆನಿಸಿದೆ, ಇದಕ್ಕೆ ವಿಪರೀತವಾಗಿ ನಡೆದರೆ ಅಶುಭ (ಇದರಿಂದಲೆ) ಶಿಲುಬೆ ಚಿಹ್ನೆಯೂ ಹುಟ್ಟಿತು. ಕ್ರಿಸ್ತನಿಗಿಂತ ಸಾವಿರಾರು ವರ್ಷ ಹಿಂದೆಯೇ ಶಿಲುಬೆ ಚಿಹ್ನೆ ಪ್ರಚಾರದಲ್ಲಿದ್ದಿತು. ಈ ಊಹೆಯು ಮೇಲಿನ ಊಹೆಗೆ ವ್ಯತಿರಿಕ್ತವಾಗಿಲ್ಲ. ವೈದಿಕಮತದಲ್ಲಿ ಪೃಥ್ವಿಯಲ್ಲಿ ಅಗ್ನಿ, ಅಂತರಿಕ್ಷದಲ್ಲಿ ವಿದ್ಯುತ್, ದಿವಿಯಲ್ಲಿ ಸೂರ್ಯ ಮೂವರೂ ಒಂದೇ ಆಗಿರುವರು.

ಪ್ರಾಚೀನ ಬ್ರಾಹ್ಮೀ ಅಕ್ಷರಗಳಲ್ಲಿ "ಓಂ" ಸ್ವಸ್ತಿಕದಂತೆಯೇ ಬರುತ್ತದೆ. ಬರೆವಣಿಗೆಗಿಂತ ಸಾವಿರಾರು ವರ್ಷ ಹಿಂದೆಯೇ ಸ್ವಸ್ತಿಕ ಚಿಹ್ನೆ ಕಂಡುಬಂದಿದೆ. ಪ್ರಾಚೀನ ಟ್ರಾಯ್ ಮತ್ತು ಹರಪ್ಪ ಲಿಪಿಗಳನ್ನು ಬ್ರಾಹ್ಮಿಗೆ ಅನ್ವಯಿಸಲು ಸಾಧ್ಯವಿಲ್ಲ, ಭಾರತದಲ್ಲಿಯೇ ಹುಟ್ಟಿದ ಈ ಚಿಹ್ನೆ ಹೇಗೆ ಪ್ರಚಾರವಾಗಿ ಪ್ರಪಂಚದಲ್ಲೆಲ್ಲ ಹರಡಿಕೊಂಡಿತು ಎಂಬುದರ ವಿವೇಚನೆ ಯುಕ್ತವಾದುದೇ.

"ಟ್ರಾಯ್" ನಿವೇಶನದ ಸಂಶೋಧನೆ ನಡೆದಾಗ ಹಿಸಾಲಿಕ್ ನಿವೇಶನದ ಮೂರು, ನಾಲ್ಕು, ಐದನೆಯ ಪಟ್ಟಗಳಲ್ಲಿ ನೂಲು ಮಾಡುವ ಕದರುಗಳ ಮೇಲೆ ಸ್ವಸ್ತಿಕ ಕಂಡುಬಂದಿದೆ. ಅದಕ್ಕೆ ಹಿಂದಿನ ಒಂದು ಎರಡನೆಯ ಪಟ್ಟಗಳಲ್ಲಿ ಕಂಡುಬಂದಿಲ್ಲವಾದುದರಿಂದ ಸುಮಾರು ಕ್ರಿಸ್ತಪೂರ್ವ ೧೫೦೦ರಲ್ಲಿ ಈ ಚಿಹ್ನೆ ಮೆಡಿಟರೇನಿಯನ್ ಸಮುದ್ರ ತೀರವನ್ನು ಸೇರಿರಬೇಕು. ಭಾರತದಿಂದಲೇ ಆರ್ಯರು ಪಶ್ಚಿಮಾಭಿಮುಖವಾಗಿ ಹೊರಟು ಕ್ಯಾಪಡೋಷಿಯ, ಆನಟೋಲಿಯ ಪ್ರಾಂತ್ಯಗಳಲ್ಲಿ ಕ್ರಿಸ್ತಪೂರ್ವ ದ್ವಿತೀಯ ಸಹಸ್ರಾಬ್ದಕ್ಕೆ ಮುಂಚೆಯೇ ಸಂಸ್ಕೃತಿಯನ್ನು ಹರಡಿದ್ದರು.

## ಸ್ವಸ್ತಿಕ ವೈವಿಧ್ಯ

ಗ್ರೀಸ್ ದೇಶದಲ್ಲಿ ನವಶಿಲಾಯುಗದ ಕಂಭಗಳ ಮೇಲೆ ಸ್ವಸ್ತಿಕ ಚಿಹ್ನೆ

ಕಂಡುಬಂದಿದೆ. ನಾಲ್ಕು ಸಣ್ಣ ಚಚ್ಚೌಕಗಳನ್ನು ಸೇರಿಸಿ ಸ್ವಸ್ತಿಕ ಮಾಡಲಾಗಿತ್ತು. ಗ್ರೀಕರ ಪುರಾತನ ನಾಣ್ಯಗಳು, ಸಾಮಾಸ್, ಸೈಪ್ರಸ್, ಸಿಸಿಲಿ ಇತ್ಯಾದಿ ಆರ್ಯರ ವಲಸೆಗಳೆಲ್ಲ ಈ ಚಿಹ್ನೆ ಹೊಂದಿವೆ. ಆದರೆ ಪ್ರಾಚೀನ ಈಜಿಪ್ಟ್ ಬ್ಯಾಬಿಲೋನಿಯ ಅಸ್ಸಿರಿಯ ಕಟ್ಟಡಗಳಲ್ಲಿ ರೋಮನ್ನರ ಸಮಾಧಿಗಳಲ್ಲಿ ಮತ್ತು ಕಟ್ಟಡಗಳ ಅಲಂಕಾರದಲ್ಲಿ ಸ್ವಸ್ತಿಕವು ಹೇರಳವಾಗಿದೆ. ಸ್ವೀಡನ್, ಡೆನ್ಮಾರ್ಕ್ ಸಮಾಧಿಗಳಲ್ಲಿ ಚಿನ್ನದ ಬಳೆಗಳ ಮೇಲೆ ಎಡಮುರಿ–ಬಲಮುರಿ ಎರಡು ವಿಧಗಳ ಸ್ವಸ್ತಿಕವಿದೆ. ಮೈಲಾನ್, ಪಾಂಪೈ, ಅಥೆನ್ಸ್, ಹಂಗೇರಿ, ಚೀಣ, ಜಪಾನ್ ಇಲ್ಲೆಲ್ಲ ಕುಂಭದ ಮೇಲೆ ಹಾಕಿದ ಗುರುತಾಗಿದೆ. ಸ್ಪೈನಿನ ತಟ್ಟೆ ಮೇಲೆ ಹಾಕುವ ವಸ್ತ್ರ, ಐರ್ಲೆಂಡಿನ ಕೆಲ್ಟಿಕ್ ಅಲಂಕಾರಗಳೂ, ಸ್ವೀಡನ್ನಿನ ಕುಂಭಗಳ ಮೇಲೆ ಸ್ವಸ್ತಿಕ ಚಿಹ್ನೆಯು "ದ್ವಿಗುಣ ಸೂರ್ಯಸರ್ಪ" (Double sun snake) ಎನ್ನಿಸಿಕೊಂಡಿವೆ.

ಭಾರತದ ಪ್ರಾಚೀನ ಶಾಸನಗಳು "ಓಂಸ್ವಸ್ತಿ" ಎಂಬ ಚಿಹ್ನೆಗಳಿಂದ ಪ್ರಾರಂಭವಾಗುವವು. ಏರಾನ್–ಗುಪ್ತನಾಣ್ಯವು ಸ್ವಸ್ತಿಕ ಚಿಹ್ನೆ ಅಕ್ಷರಗಳಲ್ಲಿ "ಓಮ್" ಎರಡನ್ನು ಹೊಂದಿದೆ; ಶ್ವೇತಾಂಬರ ಜೈನರು ಸ್ವಸ್ತಿಕವನ್ನು 'ಸತಸ್' ಎನ್ನುವರು, ಖಾರವೇಲನ ಹಾಥಿಗುಂಫ ಜೈನಶಾಸನದ ಮೊದಲಲ್ಲಿ ಈ ಚಿಹ್ನೆ ಇದೆ. ಜೈನಮತದಲ್ಲಿ ಇದು ಸಿದ್ಧರ ಚಿಹ್ನೆ. ಕೇಂದ್ರ ಬಿಂದುವಿನಿಂದ ನಾಲ್ಕು ಮಾರ್ಗಗಳು ಹೊರಡುವದು, ಚತುರ್ವಿಧ ಪುರುಷಾರ್ಥಗಳು. ಇವುಗಳಿಗೆ ಅತೀತನಾದ ಸಿದ್ಧನು ಕೇಂದ್ರದಲ್ಲಿರುವನು. ಬಾಹುಗಳು ಬಲಗಡೆಗೆ ಬಗ್ಗಿರುವುದು. ಸಿದ್ಧನಿಗೆ ನಾಲ್ಕು ಮಾರ್ಗಗಳೂ ನಿಷ್ಪ್ರಯೋಜಕವೆಂದು ತೋರಿಸುತ್ತದೆ.

## ಬುದ್ಧನ ಪ್ರತೀಕ

ಬೌದ್ಧ ಶಾಸನಗಳು, ಪಾಳಿಗ್ರಂಥಗಳು "ಸಿದ್ಧಂ" ಎಂಬ ಅಕ್ಷರಗಳೊಡನೆ ಈ ಚಿಹ್ನೆಯನ್ನು ಹೊಂದಿವೆ. ಇದು ಬುದ್ಧನ ಪ್ರತೀಕ ಅಲ್ಲದೆ ಎರಡು ತೋಳುಗಳನ್ನು ಎದೆಮೇಲೆ ಇಟ್ಟುಕೊಂಡವರ ಚಿಹ್ನೆ. ನಾಲ್ಕು ಮಾರ್ಗಗಳು ಸೇರುವ ಸ್ಥಳ. ಕಾಲುಗಳನ್ನು ಮಡಿಸಿ "ಸ್ವಸ್ತಿಕಾಸನ" ಅಥವಾ ಪದ್ಮಾಸನದಲ್ಲಿ ಕುಳಿತುಕೊಂಡ ಚಿಹ್ನೆ.

ಆರ್ಯರು ಉತ್ತರ ಧ್ರುವಪ್ರಾಂತ್ಯದಿಂದ ಮೊದಲು ದಕ್ಷಿಣಕ್ಕೆ ಹೊರಟು ಅನಂತರ ಪೂರ್ವಕ್ಕೆ ತಿರುಗಿ ಭಾರತದೇಶಕ್ಕೆ ಬಂದ ಮಾರ್ಗವನ್ನು ಸೂಚಿಸುವ ಚಿಹ್ನೆ ಎಂದು ಒಂದಭಿಪ್ರಾಯ. ಶಿಲ್ಪಶಾಸ್ತ್ರದಲ್ಲಿ ಸ್ವಸ್ತಿಕಕ್ಕೆ ಮಹತ್ವವಿದೆ. ನಗರವಿನ್ಯಾಸ, ಮರಗೆಲಸ, ಕಿಟಕಿಬಾಗಿಲುಗಳ ಅಲಂಕಾರ, ಶಿವಲಿಂಗದ ಪಾಣಿವಟ್ಟ, ತೋಡುವ ಬಾವಿಗಳು–ಇವುಗಳೆಲ್ಲ ಸ್ವಸ್ತಿಕ ಚಿಹ್ನೆ ಹೊಂದಿರುತ್ತವೆ. ಮಾನಸಾರ ಶಿಲ್ಪಶಾಸ್ತ್ರ, ಬೃಹತ್ಸಂಹಿತೆ (೫೩ನೆಯ ಅಧ್ಯಾಯ)ಗಳಲ್ಲಿ "ಸ್ವಸ್ತಿಕಗೃಹ" ನಿರ್ಮಿಸುವ ವಿಧಾನ ವ್ಯಕ್ತವಾಗಿದೆ. ಅಂತಹ ಮನೆಗೆ ಮುಖ್ಯದ್ವಾರವು ಪೂರ್ವದಲ್ಲಿ ಇರಬೇಕು. ಪಶ್ಚಿಮದಲ್ಲಿ ಉದ್ದವಾದ ತಾರಸಿ ಇರಬೇಕು. ಅಲ್ಲಿಂದ ಪಶ್ಚಿಮದಿಂದ ಪೂರ್ವಕ್ಕೆ ಹೋಗುವ ತಾರಸಿಗಳಿರಬೇಕು. ಇವುಗಳ ಕೊನೆಯಲ್ಲಿ ನಾಲ್ಕನೆಯ ತಾರಸಿ ಇರಬೇಕು. ಅಗ್ನಿಪುರಾಣ (ಅಧ್ಯಾಯ ೧೦೪) ಗರುಡ ಪುರಾಣ (೪೭ನೆಯ ಅಧ್ಯಾಯ) ಅಷ್ಟಕೋಣಾಕಾರದ ಗೃಹಗಳನ್ನು ವರ್ಣಿಸುತ್ತವೆ. ಕಾಮಿಕಾಗಮದ

ಪ್ರಕಾರ (ಅಧ್ಯಾಯ ೩೫) ಸ್ವಸ್ತಿಕ ಗೃಹಕ್ಕೆ ಎಡಬಲದಲ್ಲಿ ಆರು ನೇತ್ರಗಳಿವೆ. ಪಕ್ಕಗಳಲ್ಲಿ ನಾಲ್ಕು ನೇತ್ರಗಳಿವೆ. ಹೆಚ್ಚಿನ ವಿವರ ಮಾನಸಾರದಲ್ಲಿ ದೊರೆಯುತ್ತದೆ. ಕ್ರಿಸ್ತಪೂರ್ವ ೯ನೆಯ ಶತಾಬ್ದದ ಯಾಸ್ಕಾಚಾರ್ಯನು "ಸ್ವಸ್ತೀತಿ ಅವಿನಾಶನಾಮ" ಎಂದು ಹೇಳಿದಂತೆ ಭಾರತದ ಸ್ವಸ್ತಿಕ ಚಿಹ್ನೆ ಭಾರತೀಯ ಸಂಸ್ಕೃತಿಯಂತೆ ಅವಿನಾಶವಾಗಿ ಸರ್ವವ್ಯಾಪಿ.